which his name was printed. Indeed, the attitude of the organisers of the function had hurt the feelings of Justice Bhimaiah as also my feelings and Justice Bhimaiah made a speech about the cast system in the Hindu society and the discrimination that is made against the lower caste. I too made a similar speech. I repeat that the omission on the part of the organisers to make a mention of Justice Bhimaiah in the welcome speech was not deliberate.

S. Mallikarjuna Kharge.—May I know at least at the time of vote of thanks they regretted for the act ?

Sri C.M. Arumugham.—May I know whether he was garlanded with other Judges and the Hon. Minister were garlanded ?

Sri L.G. Havanur.—Of course, there was garlanding.

Sri C.M. Arumugham.—Was it at the same time?

Sri L.G. Havanur.—Garlanding cannot take place Simultaneously for all.

Sri C.M. Arumugham.—Is it a fact that all were garlanded and he was neglected and when somebody asked he was garlanded ?

Sri L.G. Havanur.—So far as that aspect is concerned I was not attentive.

CALLING ATTENTION TO MATTERS OF URGENT PUBLIC IMPORTANCE

reg : Clashes between landlords and harijans over occupancy rights at Appasvamanapalli Chintamani Taluk.

Sri Chowda Reddy (Chitamani).— I call the attention of the Minister for Rural Development and Panchayati Raj to the sudden clashes between the landlords and poor Harijans at Appaswamanapalli, Mittahalli Panchayat' Chillalery Hobli, Chintamani Taluk about occupancy rights on lands.

Sri K. Prabhakar (Minister for Rural Development and Panchayatraj).—I wish to make the following statement :

In Appasamanahalli village of Chintamani taluk, 30 guntas of lands was acquired for Harijan colony in Sl. Nos.1/2,2/1,2/2 and 2/3 during the year 1962. After completion of the acquisition proceedings, the records were sent to the Assistant Superintendent of Land Records for phodi work. These records have been lost in his office and not traced so far. The Tahasildar, Chintamani taluk inspected the spot and conducted enquiries which reveal that though the land was acquired and given possession to the Village Panchayats the Land continues to be under the enjoyment of the land-lords and they are raising dry

crops like Ragi, Groundnut etc. The Village Panchayat is said to have distributed the 12 sites in this land to the Harijans of the village but they have not been allowed by the Land-lords to construct houses so far. The Deputy Commissioner Kolar district also visited the village and made enquiries. Instructions were also issued to the officers to see that the sites are distributed immediately and to initiate acquisition proceedings to form sites to the remaining 30 persons who are also siteless. The Deputy Director of Social Welfare has also visited the village and made enquiries. The B.D.O. and the Tahasildar of the taluk have also inspected the spot several times in this connection.

The question of demarking of 30 guntas of land acquired appear to be problem for the delay in implementing the scheme, in the absence of the acquisition records which are missing in the office of the Asst. Superintendent of Land Records, Chickballapur. However, a sketch showing 0-30 guntas of land was got prepared by Sri Govindaraju Taluk Surveyor and the same was sent to the B.D.O. Chintamani on 12th July 1974 for taking further action. It is seen from the records of the office of the Block Development Officer that this sketch is also missing. As such 0-30 guntas of land acquired has not been demarcated and the owners of land appear to be maneaouring for their advantage and pleading to take the land at a different place.

Another reason why one of the land-lords viz. Sri Bayyanna son of Sri Muniswamy is persistently refusing to give possession of the land is that he is merely a small holder with big family and that he is not given alternate Government land. The reason why the alternate land is not given to this man is that the said land is under unauthorised occupation by some other persons in the village.

The Tahsildhar of Chintamani taluk on the occasion of his visit to the spot has obtained a written statement from Sri Bayyanna and his brothers that they would give up his 0-14 guntas of land acquired in Sl. No. 1/2 and 2/3 and they will not enter this land which could be measured and demarcated by the Surveyor. Sri Subbanna another land-lord has also given statement agreeing to handover 0-08 guntas of land acquired in Sl. No. 2/2. All the 3 owners of the land of 4 Survey numbers are thus agreeable to handover the possession of the land acquired immediately to the Block Devlopment Officer. As instructed by the Tahsildar and the Block Development Officer the Surveyor and the Junior Engineer are ready to demarcate the 0-30 guntas of land on the spot on 30th January 1979. Action will also be taken against the officials who are responsible for misplacement of records and causing unnecessary delay in the matter.

ಶ್ರೀ ಚೌಡರೆಡ್ಡಿ.—ಮಾನ್ಯ ಅಧ್ಯಕ್ಷರೇ, ೧೯೬೨ರಲ್ಲಿ ೧೨ ಜನರಿಗೆ ಸೈಟ್‌ಗಳನ್ನು ಮಂಜೂರು ಮಾಡಿದರು. ಅವರಿಗೆ ಹಕ್ಕಿನ ಪತ್ರಗಳನ್ನು ಸಹ ಕೊಟ್ಟರು. ಅಂದರೆ ಇಲ್ಲಿಗೆ ೧೭ ವರ್ಷಗಳಾಯಿತು. ೧೯೭೨ರಲ್ಲಿ ನಾನು ಈ ಬಗ್ಗೆ ಒಂದು ಪ್ರಶ್ನೆ ಕೇಳಿದಾಗ ಯಾವ ರೀತಿ ಸರ್ಕಾರದವರು ಉತ್ತರ ಕೊಟ್ಟರೋ ಅದೇರೀತಿ ಈಗಲೂ ಉತ್ತರ ಕೊಟ್ಟಿದ್ದಾರೆ. ೧೯೭೨ರಲ್ಲಿ ಇದಕ್ಕೆ ಸಂಬಾಧಪಟ್ಟ ರೆಕಾರ್ಡ್ಸ್ ಹಾಳಾಗಿದೆ. ಅನಂತರ ಅಲ್ಲಿಯು ಜಿಲ್ಲಾಧಿಕಾರಿಯವರು ಸ್ಥಳಕ್ಕೆ ಹೋಗಿ ಮಹಜರು ನಡೆಸಿದರು. ೧೯೭೪ರಲ್ಲಿ ಮತ್ತೆ ರೆಕಾರ್ಡ್‌ಗಳನ್ನು ಮಾಡಿದರು. ಈಗ ಪುನಃ ರೆಕಾರ್ಡ್‌ಗಳು ಹಾಳಾಗಿವೆ, ಈ ವಿಚಾರದಲ್ಲಿ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲವೆಂದು ನಮಗೆ ಹೇಳಿಬಿಟ್ಟರೆ ನಾವು ಅವರನ್ನು ಬೇರೆ ಕಡೆಗಾದರೂ ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡಬಹುದು. ಆದ್ದರಿಂದ ಈ ಬಗ್ಗೆ ನಿರ್ಧಿಷ್ಟವಾದ ಉತ್ತರ ನನಗೆ ಮಾನ್ಯ ಮಂತ್ರಿಗಳಿಂದ ಬೇಕಾಗಿದೆ?

ಶ್ರೀ ಕೆ. ಪ್ರಭಾಕರ್.—ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವಂತಹ ಅಂಶಗಳು ಇದರಲ್ಲಿ ಯಾವುದೂ ಕಾಣುವುದಿಲ್ಲ. ರೆಕಾರ್ಡ್ ಕಳೆದು ಹೋಗಿದೆ. ಈ ಬಗ್ಗೆ ಸೂಚನೆ ಕೊಟ್ಟಾಗಿದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅವರಿಗೆ ಕೊಡುತ್ತೇವೆ.

ಶ್ರೀ ಚೌಡರೆಡ್ಡಿ.—ಈಗಾಗಲೇ ೧೭ ವರ್ಷಗಳಾದವು. ಇನ್ನೂ ಎಷ್ಟು ವರ್ಷಗಳು ಬೇಕು ಎಂಬುದನ್ನು ಹೇಳುತ್ತೀರಾ?

ಶ್ರೀ ಕೆ. ಪ್ರಭಾಕರ್.—ಇನ್ನು ವರ್ಷಗಳು ಬೇಕಾಗುವುದಿಲ್ಲ. ಇದು ಯಾವ ರೂಪದಲ್ಲಿದೆ ಎಂಬುದು ಈಗ ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಯಾರು ಇದಕ್ಕೆ ಕಾರಣರಾಗಿದ್ದಾರೆನ್ನುವುದರ ಬಗ್ಗೆ ವಿಚಾರಣೆ ನಡೆಸಿ, ಈ ಕೆಲಸವನ್ನು ಜಾಗ್ರತೆ ಮಾಡಿಕೊಡುತ್ತೇವೆಂದು ಮತ್ತೊಮ್ಮೆ ತಮಗೆ ತಿಳಿಸುತ್ತೇನೆ.

ಶ್ರೀ ಚೌಡರೆಡ್ಡಿ.—೧೯೬೨ರಲ್ಲಿ ರೆಕಾರ್ಡ್ಸ್ ಹಾಳಾಗಿದೆ ಇದನ್ನು ಪರಿಶೀಲನೆ ಮಾಡಿ ಜಾಗ್ರತೆ ಮಾಡಿಕೊಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಮಾಡಿಕೊಡಲಿಲ್ಲ. ಈಗ ಬಿ.ಡಿ.ಒ. ಕಛೇರಿಯಲ್ಲಿ ರೆಕಾರ್ಡ್ಸ್ ಹೋಗಿದೆ ಎಂದು ಹೇಳುತ್ತೀರಿ. ಕಾನೂನು ಪ್ರಕಾರ ಕ್ರಮ ಕೈಕೊಳ್ಳುವುದಾಗಿ ತಾವು ಇಲ್ಲಿ ಹೇಳುತ್ತೀರಿ. ಆದರೆ ಅಲ್ಲಿ ಮನೆ ಕಟ್ಟಿಕೊಂಡವರು ಅನೇಕ ಸಲ ಹೊಡೆತ ತಿಂದಿದ್ದಾರೆ. ಅಧಿಕಾರಿಗಳು ಮನೆ ಕಟ್ಟಿಕೊಳ್ಳಿ ಎಂದು ಹೇಳುತ್ತಾರೆ. ಪೋಲೀಸಿನವರು ಸಹ ಹೇಳುತ್ತಾರೆ. ಅದರಂತೆ ಅವರು ಮನೆ ಕಟ್ಟಿಕೊಳ್ಳಲು ಹೋದರೆ ಆ ಜಾಗ ನಿಮ್ಮದಲ್ಲ ಎಂದು ಒದೆಯುತ್ತಾರೆ. ಇದರ ಬದಲು ಅಲ್ಲಿ ಜಾಗ ಕೊಡುವುದಕ್ಕಾಗುವುದಿಲ್ಲವೆಂದರೆ ಅವರು ಬೇರೆ ಎಲ್ಲಿಯಾದರೂ ಹೋಗುತ್ತಾರೆ. ಆದಕಾರಣ ಈ ಬಗ್ಗೆ ಸ್ಪಷ್ಟವಾದ ಭರವಸೆ ಬೇಕು;

ಶ್ರೀ ಕೆ. ಪ್ರಭಾಕರ್.—ಪಂಚಾಂಗ ಹೋದರೆ ನಕ್ಷತ್ರ ಹೋಗವುದಿಲ್ಲ. ಇಲ್ಲಿ ತಪ್ಪು ಯಾರು ಮಾಡಿದ್ದಾರೆಂಬ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ, ನಂತರ ಅವರ ಹಕ್ಕನ್ನು ರಕ್ಷಣೆ ಮಾಡಿ ಬೇಗ ಸಹಾಯ ಮಾಡುವುದಾಗಿ ಈಗಾಗಲೇ ಹೇಳಿದ್ದೇನೆ. ನಾನು ಎಷ್ಟು ಸಲ ಹೇಳಿದರೂ ಇದೇ ಉತ್ತರ ಖಚಿತ. ಬೇಗ ಇದನ್ನು ಮಾಡಿಕೊಡುತ್ತೇನೆ.

KARNATAKA PRESERVATION OF TREES (AMENDMENT) BILL 1979

as passed by the Legislative Council

Motion to Consider

† SRI G. RAME GOWDA (Minister for Food and Forest) :— Sir I beg to move :

"That the Karnataka Preservation of Trees (Amendment) Bill, 1979, as passed by the Legislative Council, be taken into consideration."

The Question was proposed

ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಅರಣ್ಯಸಂಪತ್ತನ್ನು ಆದಷ್ಟುಮಟ್ಟಿಗೆ ಕಾಪಾಡ ಬೇಕೆಂಬ ಸದುದ್ದೇಶದಿಂದ ೧೯೭೬ನೇ ಇಸವಿ ಜುಲೈ ೨೧ರಲ್ಲಿ Karnataka Preservation of Trees Act, 1976 ಎಂದು ಜಾರಿಗೆ ಬಂತು. ಆ ಸಮಯದಲ್ಲಿ ಇದು ಇಲ್ಲಿ ಚರ್ಚೆಗೆ ಬಂದಾಗ ಅನೇಕ ಮಾನ್ಯ ಸದಸ್ಯರು ಟೀ ಪ್ಲಾನ್‌ಟೇಷನ್ ಇಟ್ಟಿರುವವರು ಪ್ರತಿದಿನ ಇಲ್ಲವೇ ವಾರಕ್ಕೊಮ್ಮೆ ಇಲಾಖೆ ಅಧಿಕಾರಿಗಳ ಅಪ್ಪಣೆ ಪಡೆದು ತಮಗೆ ಬೇಕಾದ ಸೌದೆಯನ್ನು ಕಡಿದುಕೊಳ್ಳುವುದಕ್ಕೆ ಸಾಧ್ಯವಿಲ್ಲವಾದ ಕಾರಣ ಅವರಿಗೆ ಇದರಿಂದ ವಿನಾಯಿತಿ ಕೊಡಬೇಕೆಂದು ಒತ್ತಾಯ ಮಾಡಿದ್ದರು. ಆಗ ಈ ವಿಷಯವನ್ನು ಪರಿಶೀಲನೆ ಮಾಡುವುದಾಗಿ ಭರವಸೆ ಕೊಡಲಾಗಿತ್ತು. ಆ ಭರವಸೆಯ ಪ್ರಕಾರ ಮೊದಲಿನ ಆಕ್ಟ್ ಪ್ರಕಾರ ಈ ಒಂದು ಅನುಕೂಲವನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಿಲ್ಲದಿದ್ದ ಕಾರಣದಿಂದ ೧೯೭೮ನೇ ಇಸವಿ ಸೆಪ್ಟೆಂಬರ್ ೨೨ರಲ್ಲಿ ಈ ಬಗ್ಗೆ ಒಂದು ಆರ್ಡಿನೆನ್ಸ್ ಹೊರಡಿಸಲಾಯಿತು. ಟೀ ಪ್ಲಾನ್‌ಟೇಷನ್ ಅಸೋಸಿಯೇಷನ್ ಅವರು ಕೇಳಿಕೊಂಡಂತೆ, ಅವರದೇ ಜಮೀನಿನಲ್ಲಿ ಏನಾದರು ಮರಗಳು ಬಿದ್ದು ಹೋದರೆ ಇಲ್ಲವೇ ಸೌದೆಗಾಗಿ ಅವರಿಗೆ ಮರ ಬೇಕಾದರೆ, ಅರಣ್ಯ ಇಲಾಖೆಯವರ ಅಪ್ಪಣೆಯಿಲ್ಲದೆ ಮರಗಳನ್ನು ಕಡಿದುಕೊಳ್ಳಬಹುದೆಂದು ಈ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ. ಮುಖ್ಯವಾಗಿ ಟೀ ಪ್ಲಾನ್‌ಟೇಷನ್ ಅವರಿಗೆ ಅನುಕೂಲವಾಗುವಂತೆ ಇದನ್ನು ತಿದ್ದುಪಡಿ ಮಾಡಲಾಗಿದೆ. ಮೇಲ್ಮನೆಯಲ್ಲಿ ಈ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಕೊಟ್ಟಿರುವುದರಿಂದ ಇಲ್ಲಿಯೂ ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಟ್ಟು, ಈ ಬಿಲ್ಲನ್ನು ಆಕ್ಟ್ ಆಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಮುನಿರಾಜು (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಖಾತೆಯ ಮಂತ್ರಿಗಳು ಹೇಳಿದ ರೀತಿಯಲ್ಲಿ ಇದು ಬಹಳ ಮುಖ್ಯವಾದುದು. ೧೯೭೬ರಲ್ಲಿ ಈ ವಿಧೇಯಕ ಪಾಸಾದರೂ ಸಹಾ ಸ್ವಲ್ಪ ತೊಡಕು ಬಂತು ಎಂದು ಹೇಳಿದ್ದಾರೆ. ಟೀ ಪ್ಲಾಂಟೇಷನ್ ಏನಿದೆಯೋ ಅದಾ ಬಗ್ಗೆ ಸ್ವಲ್ಪ ತೊಡಕು ಬಂದದ್ದರಿಂದ ಒಂದು ಆರ್ಡಿನೆನ್ಸ್ ಹೊರಡಿಸಿ ಈಗ ಅದನ್ನು ಕ್ರಮಗೊಳಿಸುವುದಕ್ಕೆ ಈ ಒಂದು ವಿಧೇಯಕವನ್ನು ತಂದಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಈಗ ನಾನು ಸರ್ಕಾರದಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ ಇದರ ಬಗ್ಗೆ ಅನೇಕ ನನ್ನ ಸ್ನೇಹಿತರೂ ಕೂಡ ಹೇಳಿದ್ದಾರೆ ಒಂದು ಬಿಲ್ಲನ್ನಾಗಲಿ, ಒಂದು ಆರ್ಡಿನೆನ್ಸ್ ಆಗಲಿ ಮಾಡಿದರೆ ಅದು ಸಾರ್ವಜನಿಕರಿಗೆ ಮುಖ್ಯವಾಗಿ ಬೇಕಾಗಿದೆಯೇ ಅಥವಾ ಇಲ್ಲವೇ ಎಂಬದುದನ್ನು ಪರಿಶೀಲನೆ ಮಾಡತಕ್ಕ ವ್ಯವಸ್ಥೆ ಸರ್ಕಾರದಲ್ಲಿ ಇಲ್ಲದಂತೆ ಕಾಣುತ್ತದೆ. ಆದ್ದರಿಂದ ದಯವಿಟ್ಟು ಸಂಬಂಧಪಟ್ಟವರು ಅದನ್ನು ಏರ್ಪಾಡು ಮಾಡತಕ್ಕದು ಒಳ್ಳೆಯದು. ೧೯೭೬ನೇ ಇಸವಿಯಲ್ಲಿ ಈ ಆಕ್ಟ್ ಪಾಸಾಯಿತು. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಆರ್ಡಿನೆನ್ಸ್ ತಂದು ಆಕ್ಟ್ ಮಾಡಿದರೂ ಕೂಡ ಇದರ ಅವಶ್ಯಕತೆ ಇದೆಯೇಎಂಬುದು ಬಹಳ ಮುಖ್ಯವಾದುದು. ೧೯೭೬ನೇ ಇಸವಿಯಲ್ಲಿ ಈ ಒಂದು ಆಕ್ಟ್ ಪಾಸಾಯಿತು. ಅಲ್ಲಿಂದ ಇಲ್ಲಿಯವರೆಗೂ ಇದನ್ನು ಯಾಕೆ ಜಾರಿಗೆ ಕೊಡಲಿಲ್ಲ. ಈಗ ಟೀ ಪ್ಲಾಂಟೇಷನ್‌ಗೆ ವಿನಾಯಿತಿ ಕೊಡುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ೧೯೭೬ನೇ ಇಸವಿಯಲ್ಲಿ ಪಾಸಾದಂತಹ ಈ ಆಕ್ಟಿನಲ್ಲಿ ಅನೇಕ ಬಹಳ ಮುಖ್ಯವಾದ ಅಂಶಗಳು ಇವೆ. ಆದರೂ ಸಹ ಈ ಆಕ್ಟಿಗೆ ರೂಲ್ಸ್ ಮಾಡುವುದಕ್ಕೆ ಕಳೆದ ತಿಂಗಳು ನೋಟಿಫಿಕೇಷನ್ ಆಗಿದೆ. ರೂಲ್ಸ್ ಮಾಡುವುದಕ್ಕೆ ೨ ವರ್ಷ ತಡವಾಗಿದೆ. ಈಗ ಒಂದು ಆರ್ಡಿನೆನ್ಸ್ ಹೊರಡಿಸಿ ಅದರ ಬಗ್ಗೆ ಒಂದು ಬಿಲ್ಲನ್ನು ತಂದಿದ್ದಾರೆ. ಈಗ ಇದರ ಅವಶ್ಯಕತೆ ಇದೆಯೋ ಅಥವಾ ಇಲ್ಲವೇ? ಇದು ಮಾನ್ಯ ಮಂತ್ರಿಗಳಿಗೆ ಬಹಳ ಚೆನ್ನಾಗಿ ಗೊತ್ತಿದೆ. ಟ್ರೀ ಅಥಾರಿಟಿಯನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮಾಡಬೇಕೆಂದು ಕಾನೂನಿನಲ್ಲಿದೆ. ಇದು ಬಹಳ ಉತ್ತಮವಾದುದಾದರೂ ಇದನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆಯೇ? ಅಧಿಕಾರಿಗಳೂ ಕೂಡ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ನಿಜವಾಗಿಯೂ ಇದಕ್ಕೆ ಯಾರು ಜವಾಬ್ದಾರರಾಗುತ್ತಾರೆ ಎಂಬುದನ್ನು ತಿಳಿಸಬೇಕೆಂದು ಮಾನ್ಯಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

† ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸ್ವಾಮಿ, ೧೯೭೬ನೇ ಇಸವಿಯಲ್ಲಿ ಈ ಒಂದು ವಿಧೇಯಕ ಸಭೆಯಮುಂದೆ ಬಂದಾಗ ಆಗಿನ ಮಂತ್ರಿಗಳಲ್ಲಿ ನಾವು ಕೆಲವು ವಿಜ್ಞಾಪನೆಗಳನ್ನು ಮಾಡಿಕೊಂಡಿದ್ದೆವು. ನಮ್ಮ ಹಿಡುವಳಿಗಳಲ್ಲಿರತಕ್ಕಂತಹ ಮರಗಳನ್ನು ಕಡಿಯಬೇಕಾದರೆ ಪರವಾನಿಗೆ ಪಡೆಯದೆ ಮರವನ್ನು ಕಡಿಯಕೂಡದು ಎಂದು ಮಾಡಿರತಕ್ಕಂತಹದ್ದು ಒಂದು ಕಠೋರವಾದ ಶಾಸನ. ಮಲೆನಾಡಿನಲ್ಲಿ ಅಡಿಕೆಯನ್ನು ಬೇಯಿಸುತ್ತಾರೆ. ಆದ್ದರಿಂದ ಅಡಿಕೆ ಪ್ಲಾಂಟೇಷನ್‌ನವರಿಗೆ ಹೇರಳವಾದ

ಕಟ್ಟಿಗೆ ಬೇಕು. ಆ ಕಟ್ಟಿಗೆಯನ್ನು ತೆಗೆದುಕೊಳ್ಳಬೇಕಾದರೆ ಪರ್ಮಿಷನ್ ತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅಡಿಕೆಯನ್ನು ಬೇಯಿಸುವ ಸಮಯದಲ್ಲಿ ಕಟ್ಟಿಗೆಯನ್ನು ಕಾಡಿನಿಂದ ತೆಗೆದುಕೊಳ್ಳುವ ಬಗ್ಗೆ ಲೈಸೆನ್ಸ್ ಪಡೆದುಕೊಳ್ಳುವುದಕ್ಕೆ ಎಕ್ಸಂಪಷನ್ ಕೊಡಬೇಕೆಂದು ಕೇಳಿಕೊಂಡಿದ್ದೆವು. ಆ ಸಮಯದಲ್ಲಿ ಶ್ರೀಮಾನ್ ಕೆ.ಎಚ್. ಪಾಟೀಲರವರು ಅರಣ್ಯ ಖಾತೆಯ ಮಂತ್ರಿಗಳಾಗಿದ್ದರು. ಆದರೆ ನಮ್ಮ ಬೇಡಿಕೆಗಳು ಹಾಗೆಯೇ ಉಳಿದಿವೆ. ಟೀ ಪ್ಲಾಂಟೇಷನ್ ಬಗ್ಗೆ ಮಾತ್ರ ಎಕ್ಸಂಪಷನ್ ಕೊಡಬೇಕೆಂದು ಈಗ ತಿದ್ದುಪಡಿಯನ್ನು ತಂದಿದ್ದಾರೆ. ಅಡಿಕೆ ಬೇಯಿಸತಕ್ಕ ಜನರಿಗೆ ಕಟ್ಟಿಗೆಯ ಅವಶ್ಯಕತೆ ಬಹಳ ಇದೆ. ಕಟ್ಟಿಗೆ ಇಲ್ಲದೆ ಅಡಿಕೆ ಬೇಯಿಸುವುದಕ್ಕೆ ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸಿ ಅಡಿಕೆಯನ್ನು ತಯಾರು ಮಾಡುತ್ತಾರೆ. ಆದರೆ ನಮ್ಮ ಮಲೆನಾಡಿನಲ್ಲಿ ಅಡಿಕೆಯನ್ನು ಬೇಯಿಸುತ್ತಾರೆ. ಆದ್ದರಿಂದ ಹೇರಳವಾದ ಕಟ್ಟಿಗೆ ಬೇಕಾಗುತ್ತದ. ಮಳೆಗಾಲ ಬಂದರೆ ಕಟ್ಟಿಗೆಯನ್ನೊದಗಿಸಿಕೊಳ್ಳುವುದು ಕಷ್ಟವಾಗುತ್ತದೆ. ಅಡಿಕೆಯನ್ನು ಬೇಯಿಸತಕ್ಕ ಕಾಲದಲ್ಲಿ ಅಡಿಕೆ ಬೆಳೆಗಾರರು ಬಹಳ ಬವಣೆ ಪಡುತ್ತಿದ್ದಾರೆ. ಟೀ ಪ್ಲಾಂಟೇಷನ್ ಅವರಿಗೆ ಯಾವ ರೀತಿ ಎಕ್ಸಂಪಷನ್ ಕೊಟ್ಟಿದ್ದೀರೋ ಅದೇ ರೀತಿ ಅಡಿಕೆ ಬೆಳೆಗಾರರಿಗೂ ಕೂಡ ಎಕ್ಸಂಪಷನ್ ಕೊಡುವುದು ಒಳ್ಳೆಯದು. ಮಲೆನಾಡಿನಲ್ಲಿ ಕಟ್ಟಿಗೆಗೋಸ್ಕರ ಜನಗಳು ಎಷ್ಟು ಕಷ್ಟಪಡುತ್ತಿದ್ದಾರೆಂಬುದು ನನಗೆ ಗೊತ್ತಿದೆ. ಗೋಬರ್ ಗ್ಯಾಸ್ ಹಾಕಿಕೊಳ್ಳಿ ಎಂದು ಹೇಳುತ್ತಾರೆ. ಇದು ಶ್ರೀಮಂತರಿಗೆ ಸಾಧ್ಯವಾಗುತ್ತದೆಯೇ ಹೊರತು ಬಡವರಿಗೆ ಸಾಧ್ಯವಾಗುವುದಿಲ್ಲ. ಗೋಬರ್ ಗ್ಯಾಸ್ ಹಾಕುವುದಕ್ಕೆ ಬಹಳ ವೆಚ್ಚ ತಗಲುತ್ತದೆ. ಆದ್ದರಿಂದ ಟೀ ಪ್ಲಾಂಟೇಷನ್ ಅವರಿಗೆ ಯಾವ ರೀತಿ ರಿಯಾಯಿತಿ ಕೊಡುತ್ತಿರೋ ಅದೇ ರೀತಿ ಅಡಿಕೆ ಬೆಳೆಗಾರರಿಗೂ ರಿಯಾಯಿತಿ ಕೊಡಬೇಕೆಂದು ಸೂಚಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಕೆ. ಶಿವರುದ್ರಪ್ಪ. (ಗುಂಡ್ಲುಪೇಟೆ)— ಮಾನ್ಯ ಅಧ್ಯಕ್ಷರೆ, 1976ನೇ ಇಸವಿಯಲ್ಲಿ ಟ್ರೀಪ್ರಿಸರ್ವೇಷನ್ ಆಕ್ಟ್ ಪಾಸಾಯಿತು. ಅಲ್ಲಿಂದೀಚೆಗೆ ದೇಶದ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಈ ಸಭೆಗೆ ತಿಳಿಸುವುದು ನನ್ನ ಕರ್ತವ್ಯ. ಸ್ವಾಮಿ, ಅರಣ್ಯ ವರ್ಷೇ ವರ್ಷೆ ಕಡಿಮೆಯಾಗುತ್ತಿದೆ. ಅದನ್ನು ನಾವು ಅಭಿವೃದ್ಧಿಪಡಿಸಬೇಕು. ಈ ದೃಷ್ಟಿಯಿಂದ ಇದು ಅವಶ್ಯಕ ಎನ್ನತಕ್ಕ ವಾದವನ್ನು ಒಪ್ಪುತ್ತೇನೆ. ಸರ್ಕಾರದ ಮತ್ತು ಎಲ್ಲರ ಅಭಿಪ್ರಾಯವೂ ಕೂಡ ಕಾಡನ್ನು ಬೆಳೆಸಬೇಕು. ಕಾಡನ್ನು ಉಳಿಸಬೇಕು ಎನ್ನುವುದೇ ಆಗಿದೆ. ಈಗ ಸರ್ಕಾರದವವು ಕಾಡಿನಲ್ಲಿ ಮರಗಳನ್ನು ಕಡಿಯುವುಕ್ಕೆ, ಸೌದೆಯನ್ನು ತರುವುದಕ್ಕೆ ಪರವಾನಗೆ ಕೊಡುವುದಿಲ್ಲ. ಕಾಡಿಂದ ಸೌದೆಯನ್ನು ತರುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಡದೆ ಇದ್ದರೆ ಸೌದೆಯನ್ನು ಎಲ್ಲಿಂದ ತರಬೇಕು. ಸಾಮಾನ್ಯವಾಗಿ ಜನರು ತಾತ, ಮುತ್ತಾತನ ಕಾಲದಿಂದಲೂ ಅಡಿಗೆಗೋಸ್ಕರ ಸೌದೆಯನ್ನು ಕಾಡಿನಿಂದ ತರತಕ್ಕಂತಹ ಪರಿಪಾಠ ಇದೆ. ಇಲ್ಲದೆ ಹೋದರೆ ವ್ಯವಹಾರ ನಡೆಯುವುದಿಲ್ಲ. ನಮ್ಮ ಸ್ವಂತ ಜಮೀನಿನಲ್ಲಿರತಕ್ಕ ಮರಗಳನ್ನು ಕಡಿಯಬಾರದು. ಅವುಗಳನ್ನು ಕಡಿಯಬೇಕಾದರೆ ಸರ್ಕಾರದಿಂದ ಮಾಫಿ ಲೈಸೆನ್ಸ್ ತೆಗೆದುಕೊಂಡು ಬಂದ ಕಡಿಯಬೇಕೆಂದು ಮಾಡಿದ್ದಾರೆ. ಇದರಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಿಗೆ ತುಂಬಾ ಕಷ್ಟವಾಗಿದೆ. ಬೆಂಗಳೂರು ಮತ್ತು ಇತರ ಪಟ್ಟಣಗಳ ಪ್ರಶ್ನೆಯೇ ಬೇರೆ. ಬೆಂಗಳೂರಿನಲ್ಲಿ ಅಡಿಗೆ ಮತ್ತು ಸ್ನಾನಕ್ಕಾಗಿ ಬೇರೆ ಬೇರೆ ಸೌಲಭ್ಯಗಳನ್ನು ಕಲ್ಪಿಸಿಕೊಂಡಿದ್ದಾರೆ. ಎಲೆಕ್ಟ್ರಿಸಿಟಿ ಇದೆ, ಸೀಮೆಯೆಣ್ಣೆ ಇದೆ ಇದ್ದಿಲು ಇದೆ, ಹೀಗೆ ನಾನಾ ತರದ ಸೌಲಭ್ಯಗಳನ್ನು ಪಟ್ಟಣದವರು ಪಡೆದುಕೊಂಡಿದ್ದಾರೆ ಗ್ರಾಮಾಂತರ ಪ್ರದೇಶದವರಾದ ನಮಗೆ ಸೌದೆಬಿಟ್ಟರೆ ಬೇರೆ ಯಾವುದೂ ಇಲ್ಲ. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಗೋಬರ್ ಗ್ಯಾಸ್ ಪ್ಲಾಂಟ್ ಹಾಕಿಕೊಳ್ಳಬೇಕಾದರೂ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸೌದೆಯ ಸಮಸ್ಯೆ ನಮ್ಮ ದೇಶದಲ್ಲಿ ಒಂದು ದೊಡ್ಡ ಕ್ರಾಂತಿಯಾಗುತ್ತಿದೆ. ನಮ್ಮ ಜಮೀನಿನಲ್ಲಿರತಕ್ಕ ಮರಗಳನ್ನು ಕಡಿಯುವುದಕ್ಕೂ ಇವತ್ತು ಅವಕಾಶ ಕೊಡುತ್ತಿಲ್ಲ. ರೈತ ತನ್ನ ಜಮೀನಲ್ಲಿರತಕ್ಕ ಮರ ಕಡಿಯಬೇಕಾದರೆ ಮಾಫಿ ಲೈಸೆನ್ಸ್ ಪಡೆದುಕೊಳ್ಳಬೇಕು. ಲೈಸೆನ್ಸ್ ತೆಗೆದುಕೊಳ್ಳದೆ ಮರ ಕಡಿದರೆಕೇಸು ಹಾಕುತ್ತಾರೆ. ಈ ದೃಷ್ಟಿಯಿಂದ ರೈತನಿಗೆ ಎಷ್ಟು ತೊಂದರೆ ಇದೆ ಎಂಬುದನ್ನು ತಿಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮೊದಲು ರೈತರು ಯಾರಾದರೂ ತಮ್ಮ ಜಮೀನಿನಲ್ಲಿರತಕ್ಕಂತಹ ಮರವನ್ನುಕಡಿಯಬೇಕಾದರೆ ಮಾಫಿ ಲೈಸೆನ್ಸ್ ತೆಗೆದುಕೊಳ್ಳಲು ಮೊದಲು ರೇಂಜ್ ಫಾರೆಸ್ಟ್ ಆಫೀಸರಿಗೇ ಅರ್ಜಿಹಾಕಿಕೊಳ್ಳಬೇಕು. ಅವರು ಅದನ್ನು ಸಂಬಂಧಪಟ್ಟ ತಹಶೀಲ್ದಾರವರಿಗೆ ಕಳುಹಿಸಿಕೊಡುತ್ತಾರೆ. ಅವರು ಆ ಜಮೀನು ಅರ್ಜಿದಾರರಿಗೆ ಸೇರಿದೆಯೇ? ಅಲ್ಲಿ ಮರ್ ಇದೆಯೇ? ಎಂಬುದನ್ನು ನೋಡಿ ತಿಳಿಸಬೇಕೆಂದು ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಕಳುಹಿಸುತ್ತಾರೆ. ಆ ಮೇಲೆ ರೆವಿನ್ಯೂ

ಇನ್ಸ್‌ಪೆಕ್ಟರ ಆ ಮರ ಅವನಿಗೆ ಸೇರಿದೆಯೋ ಇಲ್ಲವೇ ಎಂಬುದನ್ನು ತಿಳಿದು ತಹಸೀಲ್ದಾರರಿಗೆ ವರದಿ ಕಳುಹಿಸುತ್ತಾರೆ. ಆದಾದ ಮೇಲೆ ಇದನ್ನು ತಹಸೀಲ್ದಾರರು ಡಿ.ಎಫ್.ಓ.ಗೆ ಕಳುಹಿಸುತ್ತಾರೆ. ಡಿ.ಎಫ್.ಓ. ಅದನ್ನು ವಿಚಾರಣೆಮಾಡಿ ಡೆಪ್ಯುಟಿ ಕಮೀಷನರ್‌ಗೆ ಕಳುಹಿಸುತ್ತಾರೆ. ಡೆಪ್ಯುಟಿ ಕಮಿಷನರ್ ಆ ಜಮೀನಿನ ಡಿಕ್ಲರೇಷನ್ ಆಗಿದೆಯೋ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಟ್ರಿಬ್ಯೂನಲ್‌ಗೆ ಕಳಿಸುತ್ತಾರೆ. ಇದೆಲ್ಲಾ ಪ್ರೊಸೀಜರುಗಳೂ ಆಗಿ ಮತ್ತೆ ಡೆಪ್ಯುಟಿ ಕಮಿಷನರ್‌ಗೆ ಬಂದು ಅವರ ಒಂದು ತೀರ್ಮಾನ ಬರಬೇಕಾದರೆ 2 ವರ್ಷ ಬೇಕಾಗುತ್ತದೆ. ಅಲ್ಲಿಯವರೆಗೆ ರೈತನ ಗತಿ ಏನು? ನನ್ನ ಸ್ವಂತ ಜಮೀನಿನಲ್ಲಿ ಒಂದು ಮರ ಕಡೆಯುವುದಕ್ಕೆ ಅರ್ಜಿ ಹಾಕಿ ಒಂದು ವರ್ಷದ ಮೇಲೆ ಮೂರು ತಿಂಗಳಾಯಿತು ಇನ್ನೂ ನನಗೆ ಲೈಸೆಂಸ್ ಬಂದಿಲ್ಲ. ನನ್ನಂತಹವನಿಗೆ ಹೀಗಾದರೆ ಇನ್ನು ಸಾಮಾನ್ಯ ರೈತನಿಗೆ ಎಷ್ಟು ಕಷ್ಟವಾಗುತ್ತದೆ. ಅವನು ಹೇಗೆ ಜೀವನ ಮಾಡಬೇಕು? ಕಾಡಿನಲ್ಲಿ ಸೌದೆ ಕಡಿಯುವುದಕ್ಕೆ ಅವಕಾಶ ಕೊಡುವುದಿಲ್ಲ. ಮರವನ್ನು ಕಡಿಯುವುದಕ್ಕೆ ನಾನಾ ತೊಂದರೆಗಳು ಇವೆ. ಜನಗಳಿಗೆ ಸೌದೆ ಒದಗಿಸುವುದು ಸರ್ಕಾರದ ಜವಾಬ್ದಾರಿ. ಆದರೆ ಸರ್ಕಾರದವರು ಆ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ನಮ್ಮ ರಾಜ್ಯಕ್ಕೆ ಒಂದು ವರ್ಷಕ್ಕೆ 5 ಲಕ್ಷ ಟನ್ ಸೌದೆ ಬೇಕಾಗುತ್ತದೆ. ಆದರೆ ಸಪ್ಲೈ ಆಗುವುದು ಕೇವಲ ಒಂದು ಲಕ್ಷ ಟನ್ ಮಾತ್ರ. ಸರ್ಕಾರದವರು ನಮ್ಮ ರಾಜ್ಯದಲ್ಲಿ ಸೌದೆ ಡಿಪೋ ತೆರೆದು ಜನರಿಗೆ ಸೌದೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಗುಂಡ್ಲುಪೇಟೆಯಲ್ಲಿ ಸೌದೆ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ನಮಗೆ ಸೌದೆಯನ್ನೊದಗಿಸಬೇಕೆಂದು ನಾನು ಅನೇಕ ಸಾರಿ ಅಧಿಕಾರಿಗಳಿಗೆ ಹಾಗೂ ಮಂತ್ರಿಗಳಿಗೆ ತಿಳಿಸಿದ್ದೇನೆ. ಆದರೂ ಸಹಾ ಸೌದೆಯನ್ನು ಒದಗಿಸಿಲ್ಲ. ಮಾಫಿ ಲೈಸೆನ್ಸನ್ನು ರೈತ ಅರ್ಜಿಯನ್ನು ಹಾಕಿದ ಒಂದು ತಿಂಗಳೊಳಗಾಗಿ ಕೊಡುವಂತಹ ವ್ಯವಸ್ಥೆ ಮಾಡಬೇಕು. ಒಂದು ತಿಂಗಳಲ್ಲಿ ಲೈಸೆನ್ಸ್ ಬರದೇಹೋದರೆ ರೈತ ಮರ ಕಡಿಯುವುದಕ್ಕೆ ಅವಕಾಶ ಕಲ್ಪಿಸಬೇಕು ಈ ರೀತಿ ಮಾಡಿದರೆ ಸಮಸ್ಯೆಯೂ ಬಗೆಹರಿಯುತ್ತದೆ. ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಹೇರಳವಾಗಿ ಸೌದೆಯನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು. ಇಲ್ಲದೆ ಹೋದರೆ ಜನಗಳು ಕಳ್ಳತನದಿಂದ ಸೌದೆಯನ್ನು ಕಾಡಿನಿಂದ ಹೊತ್ತುಕೊಂಡು ಬರುತ್ತಾರೆ ನಮ್ಮ ಗುಂಡ್ಲುಪೇಟೆಯಲ್ಲಿ ಕೆಲವು ಜನ ಸೌದೆ ತಲೆಹೊರೆಯನ್ನು ಹೊತ್ತುಕೊಂಡು ಬರುತ್ತಾರೆ. ಅವರಿಗೆ ಒಂದು ಹೊರೆಗೆ ಹತ್ತು ಹನ್ನೆರಡು ರೂಪಾಯಿ ಸಿಕ್ಕುತ್ತದೆ. ಈ ಜನರು ಬಹಳ ಬಡವರು. ಜೀವನಕ್ಕೆ ಬೇರೆ ದಾರಿಯಿಲ್ಲದ ಕಾರಣ ಅವರು ಈ ವೃತ್ತಿಯನ್ನು ಕೈಗೊಂಡಿದ್ದಾರೆ. ಅಂತಹವರ ಮೇಲೆ ಪೋಲೀಸ್‌ನವರು ಕೇಸ್ ಹಾಕಿದ್ದಾರೆ. ಹೊಟ್ಟೆಗಿಲ್ಲದವರ ಮೇಲೆ ಇಂತಹ ಅನ್ಯಾಯ ನಡೆಯುತ್ತಿದೆ. ಅವರು ದಂಡವನ್ನು ಕೊಡತಕ್ಕ ಸ್ಥಿತಿಯಲ್ಲಿ ಇಲ್ಲ. ಈ ಅನ್ಯಾಯವನ್ನು ಸರಿಪಡಿಸಬೇಕಾದರೆ ಲೈಸೆನ್ಸ್‌ಗೆ ಅರ್ಜಿಯನ್ನು ಹಾಕಿದ ಒಂದು ತಿಂಗಳೊಳಗಾಗಿ ಲೈಸೆನ್ಸ್ ಕೊಡಬೇಕು. ಇಲ್ಲದಿದ್ದರೆ ಇವರ ಜಮೀನಿನಲ್ಲಿ ಇರತಕ್ಕಂತಹ ಮರಗಳನ್ನು ಕಡಿಯುವುದಕ್ಕೆ ಕಾನೂನಿನಲ್ಲಿ ತಕ್ಕ ಅವಕಾಶವನ್ನು ಅಳವಡಿಸಬೇಕು. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 ಪಿ. ಎಂ.

† ಶ್ರೀ ಎಚ್. ವಿಶ್ವನಾಥ್ (ಕೆ. ಆರ್. ನಗರ).— ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ಮರಗಳ ಸಂರಕ್ಷಣೆ ಕಾನೂನಿಗೆ ತಿದ್ದುಪಡಿಯನ್ನು ಮಾಡುತ್ತಿದ್ದಾರೋ ಈ ತಿದ್ದುಪಡಿ ಬಹುಶಃ ಮತ್ತೆ ಬಡ ರೈತನ ಮೇಲೆ ಇನ್ನೂ ಒಂದು ಹೊರೆಯನ್ನು ಸರ್ಕಾರ ಹೊರಿಸುತ್ತಾ ಇದೆ ಎನ್ನುವುದು ನನ್ನ ಭಾವನೆ. ಏಕೆಂದರೆ, ನನ್ನ ಕ್ಷೇತ್ರದಲ್ಲಿ ಈ ಸೌದೆಗಾಗಿ ಪಡತಕ್ಕ ಬವಣೆ ಬಗ್ಗೆ ಹೇಳಬೇಕು ಎಂದರೆ ಒಂದು ಲಕ್ಷದ 70 ಸಾವಿರದ ಪ್ರಜಾ ಸಂಖ್ಯೆ ಇರತಕ್ಕ ನಮ್ಮ ಕ್ಷೇತ್ರ ಸೌದೆ ಸರಬರಾಜಿನ ಬಗ್ಗೆ ಕೇಳಿದ ಪ್ರಶ್ನೆಗೆ ತಾವು ಕೊಟ್ಟಿರುವ ಉತ್ತರದ ಪ್ರಕಾರ 1200 ಟನ್ ಇಷ್ಟು ಕಡಿಮೆ ಸೌದೆಯನ್ನು ಕೊಟ್ಟು ಮರಗಳನ್ನು ಕಡಿಯಬೇಡಿ ಎಂದು ಹೇಳಿದರೆ ಅದು ಎಷ್ಟರಮಟ್ಟಿಗೆ ಯೋಗ್ಯ ಎನ್ನುವುದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು ಎಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಒಂದೊಂದು ಕ್ಷೇತ್ರಕ್ಕೂ ಅಂದರೆ ತಾಲ್ಲೂಕು ಕೇಂದ್ರದಲ್ಲಿ ಒಂದೊಂದೇ ಸೌದೆ ಡಿಪೋವನ್ನು ತೆಗೆದಿದ್ದೀರಿ. ಒಂದು ಲಕ್ಷ, ಎರಡು ಲಕ್ಷ ಪ್ರಜಾ ಸಂಖ್ಯೆ ಇರುವ ಕಡೆ ಒಂದೇ ಒಂದು ಸೌದೆ ಡಿಪೋ ತೆಗೆದು, ರೈತನಿಗೆ ತನ್ನ ಹೊಲದಲ್ಲಿರತಕ್ಕ ಮರವನ್ನು ಕಡಿಯಬೇಡಿ ಎಂದು ಹೇಳಿದರೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಕ್ಷೇತ್ರದ ಕಡೆಯ ಭಾಗದಿಂದ ರೈತ ಬರಬೇಕಾದರೆ 30 ಕಿಲೋಮೀಟರ್ ಆಗುತ್ತದೆ ಇಷ್ಟು ದೂರ ಗಾಡಿ ಕಟ್ಟಿಕೊಂಡು ಬಂದರೂ ಸೌದೆ ಸಿಕ್ಕದೇಹೋದರೆ ರೈತನಿಗೆ ನಿರಾಶೆಯಾಗುತ್ತದೆ. ಈ ಕಾನೂನಿನಿಂದ ರೈತನ ಬವಣೆ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಆದುದರಿಂದ ತಾವು